ಮಾಡುತ್ತಿದ್ದೇವೆ. ಇದು ಹಳೇ ಕಾಲದ್ದು, ಎರಡು ಕಂತು release ಆಗಿದೆ. ಇನ್ನೊಂದು ಕಂತು release ಆಗಬೇಕು. ತಕ್ಷಣ release ಮಾಡುವುದಕ್ಕೆ.....

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಕಂತು ಅಲ್ಲ,

(13) ವಿಷಯ: ಕೃಷಿ ಇಲಾಖೆಯಲ್ಲಿ ಜೈವಿಕ ಗೊಬ್ಬರ, ಕೀಟನಾಶಕ, ಜಿಪ್ಸಂ ಕೊರತೆ ಬಗ್ಗೆ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ಈ ಬಾರಿ ರಾಜ್ಯದ ಎಲ್ಲಾ ಕಡೆ ಉತ್ತಮವಾಗಿ ಮಳೆಯಾಗಿದೆ. ಆದರೆ ರೈತ ಸಂಪರ್ಕ ಕೇಂದ್ರಗಳಲ್ಲಿ ಜೈವಿಕ ಗೊಬ್ಬರ, ಜೈವಿಕ ಕೀಟನಾಶಕ ಮತ್ತು ಜಿಪ್ಸಂ ಸಿಗುತ್ತಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ ಜೂನ್, ಜುಲೈನಲ್ಲಿ ಮಳೆಯಾಗಿದೆ. ಆಗಸ್ಟ್ ತಿಂಗಳು ಬಂತು. ಆದರೆ ಕೃಷಿ ಇಲಾಖೆಯಿಂದ bio pesticides, fertilizers and gypsum supply ಆಗುತ್ತಿಲ್ಲ. ರೈತರಿಗೆ ತತ್‌ಕ್ಷಣ ಅನುಕೂಲವಾಗಬೇಕು. ಅದು ಬೇಡಿಕೆ ಇದೆ. ಅದು ಇನ್ನೂ ಕೂಡ ವಿತರಣೆಯಾಗುತ್ತಿಲ್ಲ. ಅವುಗಳನ್ನು ಕೂಡಲೇ ರೈತ ಸಂಪರ್ಕ ಕೇಂದ್ರಗಳಿಗೆ ರೈತರಿಗೆ ವಿತರಿಸುವಂತಹ ಕೆಲಸವಾಗಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾನ್ಯ ಮಂತ್ರಿಗಳಿಗೆ ಮಾಡುತ್ತೇನೆ.

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಈಗ ಗಮನಕ್ಕೆ ಬಂದಿದೆ. ಇದನ್ನು ಮಾನ್ಯ ಸಂಬಂಧಪಟ್ಟವರ ಸಚಿವರಿಗೆ ಕಳುಹಿಸಿ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು: ನಿಮಗೆ ಉತ್ತರ ಬಂದಿಲ್ಲವೇ? ಅವರು ಅವತ್ತೇ ಕೇಳಿದ್ದಾರಲ್ಲ, ಅದು ಸರ್ಕಾರಕ್ಕೆ ಹೋಗಿದೆಯಲ್ಲ.

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು: ಉತ್ತರ ಬಂದಿಲ್ಲವೇ?

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಇಲ್ಲ ಉತ್ತರ ಬಂದಿಲ್ಲ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, 30ನೇ ತಾರೀಖು ತಮಗೆ ಒಂದು ಪತ್ರವನ್ನು ಕಳುಹಿಸಿದ್ದೇನೆ.

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ತಾವು permission ಕೊಟ್ಟರೆ ಒಂದು ವಿಚಾರ ಹೇಳುತ್ತೇನೆ.

ಅಧ್ಯಕ್ಷರು: ಇದನ್ನು ಸುಮ್ಮನೆ ಕೇಳುವುದಕ್ಕಾಗುತ್ತದೆಯೇ? ಹೇಳಿ ಏನು ಪ್ರಯೋಜನ? ಕೃಷಿ ಮಂತ್ರಿಗಳು ಇಲ್ಲ.

ಶ್ರೀ ಕೆ.ಶ್ರೀನಿವಾಸ ಗೌಡ: ಅವರು ಇರುವುದಿಲ್ಲ, ನಾನು ಹೇಳುತ್ತೇನೆ. ಅವರಿಗೆ ಏನಿದ್ದರೂ ಲಿಕ್ಕರ್ ಮಾಡುವುದು ಗೊತ್ತಿದೆ. ಅವರಿಗೆ ವ್ಯವಸಾಯದ ವಿಚಾರ ಗೊತ್ತಿಲ್ಲ. ನಾನು ಹೇಳುತೇನೆ, ನನಗೆ ಹೇಳುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು: ತಾವು ಬೇರೆ ಸಮಯದಲ್ಲಿ ಹೇಳಿ.

ಶ್ರೀ ಕೆ.ಶ್ರೀನಿವಾಸ ಗೌಡ: ಅದು ನಿಮ್ಮಷ್ಟ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ಸಿಗಲಿಲ್ಲ. 30ನೇ ತಾರೀಖು ನಾನು ಪತ್ರವನ್ನು ಕೊಟ್ಟರೆ, ಅದಕ್ಕೆ ಉತ್ತರ ಇಲ್ಲವೆಂದರೆ ಏನು ಅರ್ಥ.

ಶ್ರೀ ಬಸವರಾಜ ಎಸ್.ಹೊರಟ್ಟಿ: ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಆರ್.ಧ್ರುವನಾರಾಯಣ್: ಉತ್ತರ ಬರಲಿಲ್ಲವಲ್ಲ.

ಅಧ್ಯಕ್ಷರು: ಆಯಿತು, ಸಂಬಂಧಪಟ್ಟವರು ಇಲ್ಲ.

ಶ್ರೀ ಆರ್.ಧ್ರುವನಾರಾಯಣ್: ಸಂಬಂಧಪಟ್ಟವರು ಇಲ್ಲವೆಂದರೆ, ಉತ್ತರ ಸಿಗಲಿಲ್ಲವಲ್ಲ.

ಅಧ್ಯಕ್ಷರು: ಆಯಿತು, ಅವರು ಉತ್ತರ ಕೊಡುತ್ತಾರೆಂದರೆ, ಉತ್ತರದ ಕಡೆ ಕಾಲ ಆಗಿ ಹೋಗಿ ಬಿಟ್ಟಿದೆ. ಸಿದ್ದು ಸವದಿ ನೀವು ಕೇಳಿ.

ಶ್ರೀ ಆರ್.ಧ್ರುವನಾರಾಯಣ್: ಉತ್ತರವನ್ನು ಕೊಡುವುದಕ್ಕೆ ಆಗದೇ ಇರುವಂತಹ ಸರ್ಕಾರ ಇದು.

ಅಧ್ಯಕ್ಷರು: ಧ್ರುವನಾರಾಯಣ್, ಅವರು ಉತ್ತರ ತರಿಸಿ ಹೇಳುತ್ತೇನೆಂದು ಹೇಳಿದ್ದಾರಲ್ಲ, ಕುಳಿತುಕೊಳ್ಳಿ.